ದಕ್ಷಿಣ ಕನ್ನಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವಿಭಜನೆ

೭೯೮(೧೫೫೪) ಶ್ರೀ ಜಿ. ಎಸ್. ಆಚಾರ್. (ಬೈಂದೂರು) —ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ದಕ್ಷಿಣ ಕನ್ನಡ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ವಿಭಜಿಸುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಸಮಿತಿಗಳನ್ನು ರಚಿಸಲಾಗುವುದು, ಅವುಗಳ ವ್ಯಾಪ್ತಿಗೆ ಯಾವ ಯಾವ ತಾಲ್ಲೂಕುಗಳು ಸೇರುತ್ತವೆ ?

ಡಾ॥ ಎಚ್. ಆರ್. ರಾಜು (ಸಹಕಾರ ರಾಜ್ಯ ಸಚಿವರು).—

ಅ) ಇದೆ.

ಆ) ಎಷ್ಟು ಮಾರುಕಟ್ಟೆ ಸಮಿತಿಗಳನ್ನು ರಚಿಸಬೇಕೆಂಬ ಬಗ್ಗೆ ಸರ್ಕಾರವು ವಿಚಾರ ಮಾಡುತ್ತಿದೆ

ಬೀದರ್ ಜಿಲ್ಲೆಯಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳು

೮೦೨ (೧೩೨೪) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ). —ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು ಎಷ್ಟು ಸಹಕಾರಿ ಸಕ್ಕರೆ ಕಾರ್ಖಾನೆಗಳಿವೆ, ಅವು ಯಾವುವು ?

ಆ) ನಾರಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಬಸವ ಕಲ್ಯಾಣ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಸರ್ಕಾರದಲ್ಲೇನಾದರೂ ಕಾರ್ಯಕ್ರಮ ರೂಪಿಸಲಾಗಿದೆಯೇ ?

ಇ) ನಾರಂಜಾಗೆ ೩.೦೦ ಕೋಟಿ ರೂ. ಹಣ ಅವಶ್ಯವಿರುವುದನ್ನು ತಾವು ಬಿಡುಗಡೆ ಮಾಡ ಬಹುದೇ ?

ಈ) ಖಾಸಗಿ ವಲಯದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಎಷ್ಟು ಅರ್ಜಿಗಳು ಬಂದಿವೆ, ಅವರ ಹೆಸರು ಸಹಿತ ತಿಳಿಸಿರಿ ?

ಉ) ಖಾಸಗಿ ವಲಯದಲ್ಲಿ ಮಂಜೂರಾತಿ ಮಾಡುತ್ತೀರಾ ಹೇಗೆ ?

ಡಾ॥ ಎಚ್. ಆರ್. ರಾಜು (ಸಹಕಾರ ರಾಜ್ಯ ಸಚಿವರು).—

ಅ) ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ (ನಿ). ಹಳ್ಳಿಖೇಡ್, ಇದು ಇರುತ್ತದೆ.

ಆ) ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ (ನಿ) ಇವರಿಂದ ಪುರ ನೊಂದಣಿ ಆಗಿದ್ದು ಉದ್ದೇಶಿತ ಪತ್ರ ಪಡೆದಿದೆ. ರೂ. ೮೧–೪೧ ಲಕ್ಷ ಷೇರು ಹಣ ಸಂಗ್ರಹಿಸಿದೆ.

ಬಸವಕಲ್ಯಾಣ ಸಹಕಾರಿ ಸಕ್ಕರೆ ಕಾರ್ಖಾನೆಯ ವಿಷಯ ಇನ್ನು ಪರಿಶೀಲನೆಯಲ್ಲಿದೆ.

ಇ) ಹಣ ಬಿಡುಗಡೆ ಮಾಡುವ ವಿಷಯ ಪರಿಶೀಲನೆಯಲ್ಲಿದೆ.

ಈ) ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಮೆ : ಅನುಭವ ಮಂಟಪ ಶುಗರ್ಸ್ ಬೆಂಗಳೂರು ಮತ್ತು ಮೆ: ಟಕ್ಕವೆರಷ್ಟು ಶುಗರ್ಸ್ ಹೈದರಾಬಾದ್ ಇವರಿಂದ ಅರ್ಜಿಗಳು ಬಂದಿರುತ್ತವೆ.

ಉ) ಸಾಧ್ಯತೆ (ಫಿಜಿಬಿಲಿಟಿ) ವರದಿಯನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.